1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

ಸ್ಪೆಷಲ್ ಮೊಕದ್ದಮೆ ಸಂಖ್ಯೆಃ 83/2018

| | | | |
|---|---|---|---|
| ಸಾಕ್ಷಿದಾರರ ಹೆಸರು | ಡಾ. ಶ್ರೀನಿವಾಸ ಜೆ.ಸಿ. | ಪಿ.ಡಬ್ಲ್ಯೂ. | 08 |
| ತಂದೆಯ ಹೆಸರು | ಲೇ ಎ.ಜಿ.ಚನ್ನಬಸಪ್ಪ | ಸಿ.ಡಬ್ಲ್ಯೂ. | 16 |
| ವಯಸ್ಸು | 49 ವರ್ಷ | | |
| ಉದ್ಯೋಗ | ಮಕ್ಕಳ ತಜ್ಞರು, ಸರ್ಕಾರಿ ಆಸ್ಪತ್ರೆ, ಚಿಕ್ಕಮಗಳೂರು | | |
| ವಾಸಸ್ಥಳ | ಚಿಕ್ಕಮಗಳೂರು | | |

ದಿಃ 03.04.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು 24.12.2015 ರಿಂದ ಇಲ್ಲಿಯವರೆಗೂ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಮಕ್ಕಳ ತಜ್ಞನಾಗಿ ಸೇವೆ ಸಲ್ಲಿಸುತ್ತಿದ್ದೇನೆ.
2. ದಿಃ 09.01.2018 ರಂದು ರಾತ್ರಿ 12.30 ಕ್ಕೆ ಚಾಸಾ.1 ಶಿವಪ್ಪ ಇವರು ಹಲ್ಲೆಯಿಂದ ಉಂಟಾದ ಗಾಯಗಳ ಚಿಕಿತ್ಸೆಗಾಗಿ ಬಂದಿದ್ದರು. ನಾನು ಸದರಿ ಗಾಯಾಳುವನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದವು.
    1. ಎಡಕೆನ್ನೆ ಹಾಗೂ ಮೂಗಿನ ಪಕ್ಕದಲ್ಲಿ ಊತ ಹಾಗೂ ಮುಟ್ಟಿದರೆ ನೋವು.
    2. ಎಡಭುಜ, ಕುತ್ತಿಗೆ ಹಿಂಭಾಗ ಹಾಗೂ ಬೆನ್ನಿನ ಎಡಭಾಗದಲ್ಲಿ ನೋವು.
3. ಸದರಿಯವರಿಗೆ ಚಿಕಿತ್ಸೆ ನೀಡಿ ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಸದರಿ ಗಾಯದ ಪ್ರಮಾಣಪತ್ರವನ್ನು ಈಗ

ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಗಾಯದ ಪ್ರಮಾಣಪತ್ರವನ್ನು ನಿಶಾನೆ ಪಿ.12 ಎಂದು ಮತ್ತು ಅದರ ಮೇಲೆ ಸಾಕ್ಷಿ ಗುರುತು ಹಿಡಿದ ತಮ್ಮ ಸಹಿಯನ್ನು ನಿಶಾನೆ ಪಿ.12(ಎ) ಎಂದು ಗುರುತಿಸಲಾಯಿತು. ಕೈಯಿಂದ ಬಲವಾಗಿ ಹೊಡೆದಾಗ ನಿಪಿ.12 ರಲ್ಲಿ ಹೇಳಿದ ಗಾಯಗಳಾಗುವ ಆಗುವ ಸಾಧ್ಯತೆ ಇರುತ್ತದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಐ.ಎಸ್.ಟಿ., ವಕೀಲರಿಂದಃ</u>

4. ಯಾವುದೇ ವ್ಯಕ್ತಿ ಬಲವಾಗಿ ಹೊಡೆದಾಗ ಮೈಮೇಲೆ ಊತ ಬರುತ್ತದೆ ಎಂದರೆ ಸರಿ. ಒಬ್ಬ ವ್ಯಕ್ತಿ ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಸಡನ್ನಾಗಿ ಬ್ರೇಕ್ ಹಾಕಿದಾಗ ಕಂಬಿಗೆ ತಗುಲಿದರೆ ನಿಪಿ.12 ರಲ್ಲಿ ಹೇಳಿರುವ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ.1 ರವರಿಗೆ ಯಾವುದೇ ಗಾಯಗಳಾಗದೆ ಇದ್ದರೂ ಸಹ ಅವರ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-
(ಬಿ.ಪುಷ್ಪಾಂಜಲಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.